# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 66/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ಜಾನ್ ಪೀಟರ್ | P.W | 10 |
| ತಂದೆಯ ಹೆಸರು | ಜುವಾನೀಸ್ | C.W | 27 |
| ವಯಸ್ಸು | 50 ವರ್ಷ | | |
| ಉದ್ಯೋಗ | ಕೂಲಿ ಕೆಲಸ | ಪ್ರ.ವ.ಬೋ | |
| ವಾಸಸ್ಥಳ | ಮರಸಾಗರ ಗ್ರಾಮ, ಸಕಲೇಶಪುರ | ದಿನಾಂಕಃ 24.11.2022 | |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

2008-09 ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ನನಗೆ ಮನೆ ಮಂಜೂರಾಗಿತ್ತು. ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸದರಿ ವಿಷಯವನ್ನು ನನಗೆ ತಿಳಿಸಿ , ರೂ. 10 ಸಾವಿರಕ್ಕೆ ಚೆಕ್ಕನ್ನು ನೀಡಿ ಅದನ್ನು ಬ್ಯಾಂಕ್ ನಲ್ಲಿ ತೆಗೆದುಕೊ ಎಂದು ಹೇಳಿದರು . ಸದರಿ ಸಮಯದಲ್ಲಿ ಮೋಹನ್ ರಾಜ್ ಎಂಬಾತ ಪಂಚಾಯ್ತಿಯ ಕರ ವಸೂಲಿಗಾರನಾಗಿ ಕೆಲಸ ಮಾಡುತ್ತಿದ್ದು , ನಾನು ಆತನ ಮೇಲೆ ನಂಬಿಕ ಇಟ್ಟು ಸದರಿ ಚೆಕ್ಕನ್ನು ಆತನಿಗೆ ಬ್ಯಾಂಕ್ ನಿಂದ ಹಣ ಪಡೆದುಕೊಂಡು ತಂದು ನನಗೆ ಕೊಡಲು ನೀಡಿದ್ದೆನು. ಆದರೆ ಆತ ನನಗೆ ಇದುವರೆಗೂ ಯಾವುದೇ ಹಣ ನೀಡಿಲ್ಲ. ನಂತರ ಆರೋಪಿಯು ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಿಗಳನ್ನು ಫೋರ್ಜರಿ ಮಾಡಿ ಹಣ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ನನಗೆ ತಿಳಿಯಿತು. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ವಿಚಾರಿಸಿದಾಗ , ಆತ ತನ್ನ ತಪ್ಪನ್ನು ಒಪ್ಪಿಕೊಂಡು ಸದರಿಯವರ ಸಹಿ ಮತ್ತು ಸೀಲನ್ನು ತಾನೇ ಹಾಕಿ ಹಣವನ್ನು ಡ್ರಾ ಮಾಡಿರುವುದು ನಿಜ ಎಂದು ಒಪ್ಪಿಕೊಂಡನು. ಆರೋಪಿಯು ಇದೇ ರೀತಿ ಸುಮಾರು 3-4 ಜನರಿಗೆ ವಂಚಿಸಿ , ನಂಬಿಸಿ ಮೋಸ ಮಾಡಿರುವುದು ತಿಳಿಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಗೈರು ಹಾಜರಿದ್ದು , ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲವೆಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ <u>ಮಾನ್ಯ ಸ ಸ ಅ ರವರಿಂದ</u>

ಆಶ್ರಯ ಯೋಜನೆಯಡಿ ಮನೆಯ ಫಲಾನುಭವಿಗಳಿಗೆ ಸರ್ಕಾರದಿಂದ ಹಣ ಮಂಜೂರಾಗಿದ್ದು, ನನ್ನಂತೆಯೇ ಚಾಸಾ **24** ರಿಂದ **26 , 28** ರಿಂದ **30** ರವರಿಗೆ ಸಹಾ ಹಣ ಮಂಜೂರಾಗಿದ್ದು , ನನಗೆ ದಿಃ **29-08-2008** ರಂದು ರೂ. **10,000/-**ಗಳ ಚೆಕ್ಕನ್ನು ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ನೀಡಿದ್ದರು ಎಂದರೆ ಸರಿ. ಆರೋಪಿಯು ನಮ್ಮ ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಆತನ ಮೇಲೆ ನಂಬಿಕೆ ಇಟ್ಟು, ಹಣವನ್ನು ತಂದು ಕೊಡುವಂತೆ ಆತನಿಗೆ ಚೆಕ್ಕನ್ನು ಕೊಟ್ಟಿದ್ದು, ಆತ ನನಗೆ ಎರಡು ತಿಂಗಳಾದರೂ ಹಣ ನೀಡದ ಕಾರಣ , ನಾನು ವಿಚಾರಿಸಿದಾಗ ಆರೋಪಿಯು ಯಾರಿಗೂ ಹೇಳಬೇಡ ನಾನು ಹಣವನ್ನು ನನ್ನ ಸ್ವಂತಕ್ಕೆ ಬಳಸಿಕೊಂಡಿದ್ದೇನೆ ಎಂದು ಹೇಳಿದರು ಎಂದರೆ ಸರಿ. ಆಗ ಆರೋಪಿಯು ಇದೇ ರೀತಿ ಯಾರದ್ದೋ ಹೆಸರಿನ ಚೆಕ್ಕುಗಳನ್ನು ತೆಗೆದುಕೊಂಡು ಸದರಿ ಚೆಕ್ ಗೆ ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರು ಸೀಲು ಹಾಕಿಕೊಂಡು ನಕಲಿ ಸಹಿ ಮಾಡಿ ಹಣವನ್ನು ಪಡೆಯುತ್ತಿದ್ದ ಬಗ್ಗೆ ನನಗೆ ತಿಳಿಯಿತು ಎಂದರೆ ಸರಿ. ಇದರ ಕುರಿತಂತೆ ನಾನು ದಿಃ **10-02-2013** ರಂದು ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನೂ ಸಹ ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು , ಈ ಪ್ರಕರಣವು ***2013*** ನೇ ಇಸವಿಗೆ ಸೇರಿದ ಪ್ರಕರಣವಾದ ಕಾರಣ ಹಾಗೂ ಯಾವುದೇ ಸಕಾರಣಗಳು ಇಲ್ಲದ ಕಾರಣ ನಿರಾಕರಿಸಲಾಗಿದ್ದು , ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>

ಮರುವಿಚಾರಣೆಃ- ಇಲ್ಲ
ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.